೧	೨	೩	೪
೩೨)	ಸಿ–೫	ವಿ. ಆರ್. ಕುಲಕರ್ಣಿ, ಮುಖ್ಯಮಂತ್ರಿಯವರ ಅಧೀನ ಕಾರ್ಯದರ್ಶಿ.	ಸದರಿ ಹುದ್ದೆಯಿಂದ ವರ್ಗಾವಣೆ ಹೊಂದಿರುತ್ತಾರೆ. ವಸತಿಗೃಹ ದಿಂದ ಖಾಲಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
೩೩)	ಸಿ–೭	ಎಸ್. ಯೋಗಪ್ಪನವರ್, ತೋಟಗಾರಿಕೆ ಮತ್ತು ಕೃಷಿ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೩೪)	ಸಿ–೧೦	ಕೆ. ಎಂ. ಕೋಟಿ. ಸದಸ್ಯರು, ಕ. ಲೋಕಸೇವಾ ಆಯೋಗ.	ಸದರಿ ಹುದ್ದೆಯಲ್ಲಿರುತ್ತಾರೆ.
೩೫)	ಸಿ–೨೨	ಆರ್.ಜಿ. ಮಾಲೀಕರ್, ಉಪಲೋಕಾಯುಕ್ತ ಆವರ ಆಪ್ತ ಕಾರ್ಯದರ್ಶಿ,	ಸದರಿ ಹುದ್ದೆಯಲ್ಲಿರುತ್ತಾರೆ.
೩೬)	ಸಿ–೧೧(ಎ)	ಬಾಬುರಾವ್ ಮುಡಬಿ, ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ	ಸದರಿ ಹುದ್ದೆಯಲ್ಲಿರುತ್ತಾರೆ.
೩೭)	ಸಿ–೧೫(ಎ)	ವಿ. ಶಶಿಧರ್, ಗೃಹಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿರುತ್ತಾರೆ.
೩೮)	ಸಿ–೧೮(ಎ)	ಬಿ. ಎ, ಹರೀಷ್‌ಗೌಡ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೩೯)	ಸಿ–೧೯(ಎ)	ಪಿ. ಎಸ್. ಶ್ರೀನಿವಾಸಾಚಾರಿ, ರಾಜ್ಯ ರೇಷ್ಮೆ ಮತ್ತು ಪಶು ಸಂಗೋಪನಾ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಸೇವೆಯಲ್ಲಿ ಮುಂದುವರೆಸಿರುತ್ತಾರೆ.
೪೦)	ಸಿ–೭(ಎ)	ಜಯರಾಮರಾಜ ಅರಸ್, ರಾಜ್ಯರಸ್ತೆ ಸಾರಿಗೆ ಮತ್ತು ಬಂಧೀಖಾನೆ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಸೇವೆಯಲ್ಲಿ ಮುಂದುವರೆದಿರುತ್ತಾರೆ.

ನೇಸರಗಿ ಗ್ರಾಮದಲ್ಲಿ ಗ್ರಾಮೀಣ ಬ್ಯಾಂಕ್ ಕಟ್ಟಡ ಕಟ್ಟುವ ಬಗ್ಗೆ

೪೧೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ನೇಸರಗಿ ಗ್ರಾಮದಲ್ಲಿ ಕಟ್ಟುತ್ತಿರುವ ಗ್ರಾಮೀಣ ಬ್ಯಾಂಕ್ ಕಟ್ಟಡ ಅರ್ಧಕ್ಕೆ ನಿಂತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಅದನ್ನು ಪೂರ್ತಿಗೊಳಿಸಲು ಸರಕಾರದವರು ಕೈಗೊಂಡಿರುವ ಕ್ರಮವೇನು ?

ಇ) ಅದಕ್ಕೆ ಈಗ ಎಷ್ಟು ಹಣ ಖರ್ಚು ಮಾಡಲಾಗಿದೆ. ಮಂತ್ರಿ ಮುಂಗಿಯಂಲಾ ಇನ್ನೂ ಎಷ್ಟು ಕಾಲಾವಕಾಶ ಬೇಕು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳ).—

ಅ) ಬಂದಿದೆ.

ಆ) ಸದರಿ ಕಾಮಗಾರಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ೧೯೮೭–೮೮ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಆಳವಡಿಸಿಕೊಂಡು ಮಂಗಿಸಲಾಗುವುದು.

ಇ) ಇಲ್ಲಿಯವರೆಗೆ ೧೨,೬೪೦–೦೦ ರೂಗಳನ್ನು ಖರ್ಚು ಮಾಡಲಾಗಿದೆ. ಇದನ್ನು ೧೯೮೭–೮೮ನೇ ಸಾಲಿನಲ್ಲಿ ಮಂಗಿಸಲಾಗುವುದು.

ಮಂಲ್ಪೆಯಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ

೯೦೫ (ಎ). ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಒಂದೂವರೆ ವರ್ಷದಿಂದ ಸ್ಥಳೀಯ ಶಾಸಕರು ಮಂಲ್ಪೆಯಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಒತ್ತಾಯ ತಂದಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಕೊನೆಪಕ್ಷ ೧೯೮೭–೮೮ರಲ್ಲಿ ಸದರಿ ಕಾಲೇಜು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಹೌದು.

ಆ) ಆರ್ಥಿಕ ಸಂಪನ್ಮೂಲತೆಯ ಕೊರತೆಯಿಂದಾಗಿ ೧೯೮೭–೮೮ರ ಸಾಲಿನಲ್ಲಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿ ನೀಡಬಾರದೆಂದು ಸರ್ಕಾರವು ತೀರ್ಮಾನಿಸಿದೆ. ಆರ್ಥಿಕ ಸಂಪನ್ಮೂಲತೆಯು ಸುಧಾರಿಸಿದಾಗ ಈ ಬಗ್ಗೆ ಪರಿಶೀಲಿಸಲಾಗುವುದು.

ಪ್ರಾಥಮಿಕ ಶಾಲಾ ಶಿಕ್ಷಕರ ಪ್ರತಿ ನಿಯೋಜನೆ

೭೨೦. ಶ್ರೀ ರಾವಂನಾರಾಯಣ ನಾಯಕ್ (ಭಟ್ಕಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊನ್ನಾವರ, ಭಟ್ಕಳ ಹಾಗೂ ಕುಮಟಾ ತಾಲ್ಲೂಕುಗಳಲ್ಲಿ ಎಷ್ಟು ಪ್ರಾಥಮಿಕ ಶಾಲೆಗಳಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಶಿಕ್ಷಕರಿದ್ದಾರೆ ಹಾಗೂ ಎಷ್ಟು ಪ್ರಾಥಮಿಕ ಶಾಲೆಗಳಲ್ಲಿ ನಿಗದಿಪಡಿಸಿದ್ದಕ್ಕಿಂತ ಕಡಿಮೆ ಶಿಕ್ಷಕರಿದ್ದಾರೆ (ಅವು ಯಾವುವು) ತಾಲೂವಾರು ವಿವರ ನೀಡುವುದು.

ಆ) ಶಿಕ್ಷಕರು ಕಡಿಮೆ ಇರುವ ಶಾಲೆಗಳಿಗೆ ಹೆಚ್ಚಿಗೆ ಶಿಕ್ಷಕರಿರುವ ಶಾಲೆಗಳಿಂದ, ಶಿಕ್ಷಕರನ್ನು ಪ್ರತಿ ನಿಯೋಜಿಸಿ ಕೊಡಲು ಸಾಧ್ಯವಿಲ್ಲವೆ.

ಇ) ಪ್ರತಿ ನಿಯೋಜಿಸುವ ಅಧಿಕಾರ ಯಾವ ಹಂತದಲ್ಲಿದೆ ಅಧಿಕಾರಿಗಿದೆ.

ಈ) ಅವಶ್ಯವುಳ್ಳ ಸ್ಥಳಗಳಿಗೆ ಶಿಕ್ಷಕರನ್ನು ಪ್ರತಿ ನಿಯೋಜಿಸದಿದ್ದಲ್ಲಿ ಅಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಿಕ್ಕೆ ಸಾಧ್ಯವಿಲ್ಲವೇ ?